ಪಳಗಿರುವ ಪ್ರೊಫೇಸರ್ ಲೀಲಾ ಅವರು ಡಬ್ಬಿಂಗ್ ಕಾರ್ಯವನ್ನು ನಿರ್ವಹಿಸಿದ್ದಾರೆ. ಸಂಸ್ಕೃತದಲ್ಲಿ ಡಬ್ಬಿಂಗ್ ಮಾಡಿದ್ದಾರಲ್ಲದೇ ಇಂಗ್ಲಿಷ್ ಸಬ್‌ಟೈಟಲ್ ಅನ್ನು ಅಳವಡಿಸಿದ್ದಾರೆ. ವೈದ್ಯರೂ ಕವಿಗಳೂ ಆದ ಡಾ. ಶಂಕರ್ ರಾಜಾರಾಮ್ ಅವರು ಈ ಚಿತ್ರಕ್ಕಾಗಿ ನಾಲ್ಕು ಹಾಡುಗಳನ್ನು ರಚಿಸಿದ್ದಾರೆ. ರಾಷ್ಟ್ರಪ್ರಶಸ್ತಿ ವಿಜೇತ ಮನೋಜ್ ಕನ್ನೋತ್ ಚಿತ್ರದ ಸಂಕಲನಕಾರರಾಗಿ ಕೆಲಸ ಮಾಡಿದ್ದಾರೆ.

## ಪ್ರಶಸ್ತಿ-ಪುರಸ್ಕಾರ

‘ಪುಣ್ಯಕೋಟಿ’ ಚಿತ್ರದ ನಿರ್ಮಾಣಕ್ಕೆ ಕ್ರೌಡ್ ಫಂಡಿಂಗ್ ಮೂಲಕ ಸಂಪನ್ಮೂಲ ಸಂಗ್ರಹಿಸಲಾಗಿದೆ. ಮೋಹನ್‌ದಾಸ್ ಪೈ ಅವರ ‘ವಿಶ್‌ಬೇರ್ರಿ’ ಸಂಸ್ಥೆಯ ಮೂಲಕ ಎರಡು ಹಂತದಲ್ಲಿ ಕ್ರೌಡ್ ಫಂಡಿಂಗ್ ನಡೆದಿದೆ. ರವಿಶಂಕರ್ ಅವರ ಪತ್ನಿ ಸಿಂಧೂ ಅವರೂ ಚಿತ್ರ ನಿರ್ಮಾಣಕ್ಕೆ ಹಣಕಾಸಿನ ನೆರವು ನೀಡಿದ್ದಾರೆ.

ಚಿತ್ರದ ಟ್ರೈಲರ್ ಈಗಾಗಲೇ ಐದು ಲಕ್ಷ ವೀಕ್ಷಕರನ್ನು ತಲುಪಿದೆ. ಮುಂಬೈನಲ್ಲಿ ನಡೆದ ಆನಿಮೇಷನ್ ನೆಟ್‌ವರ್ಕ್‌ನ ವಾರ್ಷಿಕ ಸ್ಪರ್ಧೆಯಲ್ಲಿ 85 ನಿಮಿಷಗಳ ಈ ಚಿತ್ರ– ಬೆಸ್ಟ್ ಡಿಜಿಟಲ್ ಫಿಲ್ಮ್, ಕ್ಯಾರೆಕ್ಟರ್ ಡಿಸೈನ್, ಧ್ವನಿ ಮತ್ತು ಚಿತ್ರಕತೆಗಾಗಿ ನಾಲ್ಕು ಪ್ರಶಸ್ತಿಗಳನ್ನು ಗಳಿಸಿಕೊಂಡಿದೆ.

‘ಪುಣ್ಯಕೋಟಿ’ ಚಿತ್ರದ ಮೂಲ ಕರಡು ಚಿತ್ರಗಳನ್ನು ಚಿತ್ರಕಾರ ಬಿ.ಜಿ. ಗುಜ್ಜಾರ್ ಅವರು ಚಿತ್ರಿಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ನಂತರದ ಹಂತದಲ್ಲಿ ಕೇರಳದಲ್ಲಿನ ಸ್ಟುಡಿಯೋಗಳಲ್ಲಿ ಆನಿಮೇಷನ್ ಕೆಲಸ ನಡೆದಿದೆ. ಆನಿಮೇಷನ್ ಕಲಾವಿದ ಎ.ವಿ. ಗಿರೀಶ್ ಅವರು ರವಿಶಂಕರ್ ಅವರ ಕಲ್ಪನೆಯನ್ನು ಸಾಕಾರಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

## ಪುಣ್ಯಕೋಟಿ ಚಿತ್ರದ ಕಥಾಹಂದರ

ಸತ್ಯವನ್ನೇ ಮಾತಾಡುವ ಹಸುವಿನ ಕಥೆ ‘ಪುಣ್ಯಕೋಟಿ’. ಕಾವೇರಿ ನದಿಯ ದಡದ ಹಳ್ಳಿಯಲ್ಲಿ ಕಥೆ ನಡೆಯುತ್ತದೆ. ನದಿಯ ಇನ್ನೊಂದು ಬದಿಯಲ್ಲಿರುವ ಕಾಡನ್ನು ದುರುಪಯೋಗ ಪಡಿಸಿಕೊಳ್ಳುವ ಸಲುವಾಗಿ ಕೆಲವು ಗ್ರಾಮಸ್ಥರು ಕಾವೇರಿಗೆ ಅಡ್ಡಲಾಗಿ ಸೇತುವೆ ನಿರ್ಮಿಸುತ್ತಾರೆ. ಗೋಪಜ್ಜಿ ಎಂಬ ಬುದ್ಧಿವಂತ ವೃದ್ಧೆಯು ಮೂರ್ಖತನದ ಕಾರ್ಯ ಮಾಡಿದ ಗ್ರಾಮಸ್ಥರಿಗೆ ಎಚ್ಚರಿಕೆ ಕೊಡುತ್ತಾಳೆ. ಅರಣ್ಯ ನಾಶದಿಂದ ಮಳೆ ವಿಳಂಬವಾಗುತ್ತದೆ; ನೆಲ ಒಣಗಿ ಮೇಯುವ ಹುಲ್ಲಿಗೆ ಬರ ಬರುತ್ತದೆ ಎಂದು ಎಚ್ಚರಿಸುತ್ತಾಳೆ.



ಇಳಯರಾಜಾ ಅವರೊಂದಿಗೆ ರವಿಶಂಕರ್

ಇಂತಹ ಪರಿಸರದಲ್ಲಿ ಒಮ್ಮೆ ತನ್ನ ಕೊರಳಿಗೆ ಕಟ್ಟಿದ್ದಂತಹ ಗಂಟೆಯನ್ನು ಕಳೆದುಕೊಂಡ ‘ಪುಣ್ಯಕೋಟಿ’ ಎಂಬ ಹಸುವು ತನ್ನ ಮೇವಿಗಾಗಿ ಹೊಸ ಮೈದಾನಕ್ಕೆ ಕಾಲಿಡುತ್ತದೆ. ಅಲ್ಲಿ ‘ಅರ್ಬುದ’ ಎಂಬ ಹುಲಿಯು ಅಚಾನಕ್ಕಾಗಿ ಎದುರಾಗಿ ಬೇಟೆಯಾಡಲು ಮುಂದಾಗುತ್ತದೆ. ತನ್ನನ್ನು ತಿನ್ನಲು ಬಂದ ಹುಲಿಗೆ, ಕಂದನಿಗೆ ಹಾಲುಣಿಸಿ ಬರುವೆನೆಂದೂ, ಕಂದನ ಜವಾಬ್ದಾರಿಯನ್ನು ಬಂಧುಗಳಿಗೆ ವಹಿಸಿಕೊಟ್ಟು ಮರಳಿ ಬರುವೆನೆಂದು ಹುಲಿಯಲ್ಲಿ ಹಸು ಅನುಮತಿ ಕೇಳುತ್ತದೆ. ಹುಲಿಯು ಹಸುವಿನ ಮಾತುಗಳ ಬಗ್ಗೆ ನಂಬಿಕೆ ಬಾರದು. ಆದರೂ ಇಷ್ಟವಿಲ್ಲದೆಯೇ ಅನುಮತಿ ಕೊಡುತ್ತದೆ.



ನಿರ್ದಯ ಬೇಟೆ ಹಾಗೂ ಅರಣ್ಯನಾಶಗಳಿಂದ ನಮ್ಮ ಆವಾಸಸ್ಥಾನವನ್ನು ಅರಣ್ಯ ಜೀವಿಗಳು ಕಳೆದುಕೊಂಡಿದ್ದೇವೆ ಎಂಬುದನ್ನು ಹುಲಿಯು ಪುಣ್ಯಕೋಟಿಗೆ ಹೇಳುತ್ತದೆ. ತನ್ನ ಕರುವಿಗೆ ಹಾಲುಣಿಸಿದ ಪುಣ್ಯಕೋಟಿಯು ಮತ್ತೆ ಹುಲಿಯ ಮುಂದೆ ಹೋಗುತ್ತದೆ. ಆದರೆ ಪುಣ್ಯಕೋಟಿಯ ಮಾತಿಗೆ ತಪ್ಪದ, ಸತ್ಯವಾಕ್ಯವನ್ನು ಪಾಲಿಸಿದ್ದನ್ನು ಕಂಡು ಹುಲಿಯು ಹಸುವಿನ ಬೇಟೆಯನ್ನು ನಿರಾಕರಿಸುತ್ತದೆ.

ಹಸು–ಹುಲಿಯ ಮುಖಾಮುಖಿಯ ನಂತರ ಭಾರೀ ಮಳೆಪ್ರವಾಹ ಉಂಟಾಗಿ ಸೇತುವೆಯು ನಾಶವಾಗುತ್ತದೆ. ಪ್ರಕೃತಿಯಲ್ಲಿ ಮೊದಲು ಇದ್ದಂತಹ ಹುರುಪು–ಲವಲವಿಕೆ ಮರುಕಳಿಸುತ್ತದೆ.

ಪರಿಸರದ ಅಸಮತೋಲನದ ಪರಿಸ್ಥಿತಿಗೆ ಗ್ರಾಮಸ್ಥರ ತಪ್ಪು ನಡವಳಿಕೆಯೇ ಕಾರಣವಾಗಿ ಅರಣ್ಯದ ಜೀವಿಗಳು ತಮ್ಮ ಆವಾಸಸ್ಥಾನವನ್ನು ಕಳೆದುಕೊಳ್ಳಬೇಕಾಗುತ್ತದೆ. ಗ್ರಾಮದ ಜಾನುವಾರುಗಳಿಗೆ ಕಷ್ಟ ಎದುರಾಗುತ್ತದೆ ಎಂದು ಹೇಳುವ ಮೂಲಕ, ನೋಡುಗರಲ್ಲಿ ಪರಿಸರ ಜಾಗೃತಿಯನ್ನು ಮೂಡಿಸುವ ಘನತರ ಉದ್ದೇಶವೂ ಚಿತ್ರಕ್ಕಿದೆ.

‘ಪುಣ್ಯಕೋಟಿ’ಯನ್ನು ಚಿತ್ರಮಂದಿರಗಳಲ್ಲಿ ತೆರೆಕಾಣಿಸುವ ಸಂಕಷ್ಟದ ಬಗ್ಗೆ ಚಿತ್ರತಂಡಕ್ಕೆ ಅರಿವಿದೆ. ಹಾಗಾಗಿ, ‘ನೆಟ್‌ಫ್ಲಿಕ್ಸ್’ನಂತಹ ಆನ್‌ಲೈನ್ ಮಾಧ್ಯಮಗಳ ಮೂಲಕ ದೊಡ್ಡ ಸಂಖ್ಯೆಯ ಪ್ರೇಕ್ಷಕರನ್ನು ತಲುಪುವ ಉದ್ದೇಶ ಅವರದು.